ಓ.ಎಸ್. ನಂಃ **148/2022**
ಪಿ.ಡಬ್ಲ್ಯೂಃ **1**

ದಿನಾಂಕ **10.10.2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಆರ್.ಎಂ.ಹೆಚ್ ವಕೀಲರಿಂದ ಃ

ನನ್ನ ತಾಯಿ ಇದೇ ನ್ಯಾಯಾಲಯದಲ್ಲಿ ಪಾಲು ವಿಭಾಗ ಕೋರಿ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಅದರ ಒ.ಎಸ್ . ನಂ.116/2018 ಇತ್ತು ಎಂದರೆ ಸರಿ. ಒ.ಎಸ್ . ನಂ.116/2018 ದಾವೆಯಲ್ಲಿ ನನ್ನ ಮೇಲೆ ಮತ್ತು ಈ ದಾವೆಯ 1 ಮತ್ತು 2 ನೇ ಪ್ರತಿವಾದಿಯ ಮೇಲೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ಈ ದಾವೆಯ ದಾವೆ ಆಸ್ತಿಯು ಒ.ಎಸ್ . ನಂ.116/2018 ರಲ್ಲಿ ಇತ್ತು ಎಂದರೆ ಸರಿ. ಸದರಿ ಒ.ಎಸ್ . ನಂ.116/2018 ದಾವೆಯು ದಿ.07.12.2023 ರಂದು ವಜಾಗೊಂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಪ್ರತಿವಾದಿ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಒ.ಎಸ್.ನಂ.37/2019 ರಲ್ಲಿ ನನ್ನ ಅಕ್ಕ-ತಂಗಿಯರು ಸೇರಿಕೊಂಡು ಪಾಲು ವಿಭಾಗ ಕೋರಿ ದಾವೆಯನ್ನು ಹಿರಿಯ ನ್ಯಾಯಾಲಯದಲ್ಲಿ ಹೂಡಿರುತ್ತಾರೆ ಎಂದರೆ ಸರಿ. ಸದರಿ ಒ.ಎಸ್.ನಂ.37/2019 ರಲ್ಲಿ ನಮಗೆ ನೋಟಿಸ ಜಾರಿಯಾದರು ಸಹಿತ ಹಾಜರಾಗಿರುವುದಿಲ್ಲ ಎಂದರೆ ಸರಿ. ಒ.ಎಸ್. ನಂ.37/2019 ರಲ್ಲಿ ಸದರಿ ಈ ದಾವೆಯ 1 ಮತ್ತು 2 ನೇ ಪ್ರತಿವಾದಿಯರು ಹಾಜರಾಗಿ ದಾವೆಯನ್ನು ನಡೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಈ ದಾವೆಯ ಆಸ್ತಿಯು ಒ.ಎಸ್ . ನಂ.37/2019 ರಲ್ಲಿ ಇದ್ದು ಸದರಿ ದಾವೆಯು ದಿ.16.04.2024 ರಂದು ವಜಾಗೊಂಡಿರುತ್ತದೆ ಎಂದರೆ ಸರಿ . ದಿ.13.09.2004 ರಂದು ಸದರಿ ದಾವೆಯಲ್ಲಿನ ದಾವೆ ಆಸ್ತಿಯಲ್ಲಿ 10 ಗುಂಟೆ ಆಸ್ತಿಯನ್ನು ಆಸ್ತಿಯನ್ನು ನಾನು ನನ್ನ ಹೆಂಡತಿಗೆ ದಾನ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ಮಾರಾಟ ಮಾಡಿರುತ್ತೇನೆ.

ನನ್ನ ಮಗಳು ಐಶ್ವರ್ಯ ಮತ್ತು ನನ್ನ ಹೆಂಡತಿ ಈರಮ್ಮ ಇಬ್ಬರೂ ಸೇರಿ ಒ.ಎಸ್ . ನಂ.19/2005 ರಲ್ಲಿ, ದಾವಾ ಆಸ್ತಿಯ 39 ಗುಂಟೆ ಜಮೀನಿನ ಮೇಲೆ ಪಾಲು ವಿಭಾಗ ಕೋರಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ಒ.ಎಸ್ . ನಂ.19/2005 ರಲ್ಲಿ ವಾದಿಯರು ದಾವಾ ಆಸ್ತಿ 39 ಗುಂಟೆ ನನ್ನ ಪಾಲಿಗೆ ಬಂದಿರುವುದು ಸುಳ್ಳು ಇರುತ್ತದೆ.

ಒ.ಎಸ್.ನಂ.37/2019 ರಲ್ಲಿ ನಾನು ಮತ್ತು ವಾದಿಯರು ಕೂಡಿಕೊಂಡು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ನನಗೆ ನೆನಪಿಲ್ಲ. ಸರ್ವೆ ನಂ.392 ರಲ್ಲಿ ನನ್ನ ಪಾಲಿಗೆ 07 ಗುಂಟೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡುವುದಕ್ಕಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಮತ್ತು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ
ನ್ಯಾಯಾಧೀಶರು,ಶಹಾಪೂರ .